ಬೆಂಗಳೂರು
vishwavani.news
21.02.2017 ಮಂಗಳವಾರ

ಕೃಷಿ ಬೆಲೆ ಆಯೋಗ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

# ಆಯೋಗ ಬೆಲೆ ನಿಗದಿಗಷ್ಟೇ ಸೀಮಿತವಲ್ಲ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕೃಷಿ ಬೆಲೆ ಆಯೋಗ ಬೆಲೆ ನಿಗದಿಗೆ ಮಾತ್ರ ಸೀಮಿತವಾಗಿಲ್ಲ. ಬೆಲೆ ಆಯೋಗದ ಕ್ರಮಗಳ ಬಗ್ಗೆ ಸರಕಾರ ವಿಶಾಲ ದೃಷ್ಟಿಕೋನ ಹೊಂದಿದೆ ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ವತಿಯಿಂದ ನಾಗರಬಾವಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ ಆವರಣದಲ್ಲಿ ನಡೆದ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿ, ಬೆಲೆ ಆಯೋಗ ಬೆಲೆ ನಿಗದಿ ಜತೆಗೆ, ಉತ್ಪಾದನೆ ಹೆಚ್ಚಳ, ವೆಚ್ಚ ಕಡಿತ, ಬೆಳೆವಿಮೆ ಸೇರಿ ವಿವಿಧ ರೀತಿಯಲ್ಲಿ ರೈತರಿಗೆ ಆದಾಯ ತಂದುಕೊಡುವ ಬಗ್ಗೆ ಮಾಹಿತಿ ನೀಡುತ್ತದೆ. ಅಲ್ಲದೇ, ಭವಿಷ್ಯದ ಬೆಲೆ ನಿಗದಿ ಕುರಿತು ರೈತರಿಗೆ ಮುನ್ಸೂಚನೆ ನೀಡುತ್ತಿದೆ. ಹೀಗಾಗಿ ಇದನ್ನು ರೈತರ ಆದಾಯ ಆಯೋಗ ಎನ್ನಬಹುದು ಎಂದರು.

ಕೃಷಿಯನ್ನು ನಮ್ಮ ದೇಶದ ರೈತರು ಭಾವನಾತ್ಮಕವಾಗಿ ನೋಡುತ್ತಾರೆ. ಹೀಗಾಗಿ, ಇಲ್ಲಿ ಪ್ರಯೋಗ ಸಾಧ್ಯವಾಗುತ್ತಿಲ್ಲ. ಕೃಷಿಯನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬೇಕು. ಆಗ ಪ್ರಯೋಗಾತ್ಮಕ ಕೃಷಿ ಸಾಧ್ಯ. 1990ರ ನಂತರ ಕೃಷಿ ಮತ್ತು ಜಿಡಿಪಿ ನಡುವಿನ ಅಂತರ ಹೆಚ್ಚಾಗಿದ್ದು, ಜಿಡಿಪಿಯಲ್ಲಿ ಕೃಷಿ



ಪಾತ್ರ ಶೇ.14ರಷ್ಟು ಇಳಿದಿದೆ ಎಂದು ವಿವರಿಸಿದರು.

**ರೈತರಿಗೆ ಸರಕಾರ ಕೊಟ್ಟಿದ್ದೇನು?:** ದೇಶದಲ್ಲಿ ಕೃಷಿ ಉತ್ಪನ್ನ ಮತ್ತು ರೈತರ ಆದಾಯ ಹೆಚ್ಚಿಸಲು ಸರಕಾರಗಳು ವಿಫಲವಾಗಿವೆ ಎಂದು ಕೃಷಿ ಮತ್ತು ಆಹಾರ ನೀತಿ ವಿಮರ್ಶಕ ದೇವೇಂದ್ರ ಶರ್ಮಾ ಬೇಸರ ವ್ಯಕ್ತಪಡಿಸಿದರು.

ಕಾರ್ಯಾಗಾರದಲ್ಲಿ ಪ್ರಾಸ್ತವಿಕವಾಗಿ ಮಾತನಾಡಿ, ದೆಹಲಿ ವಿಮಾನ ನಿಲ್ದಾಣ ಅವ್ಯವಹಾರ ಮೊತ್ತ 1.68 ಲಕ್ಷ ಕೋಟಿ ರು. ಆಗಿದೆ. ಆದರೆ, ಶೇ.57ರಷ್ಟು ಜನಸಂಖ್ಯೆ ಇರುವ ಕೃಷಿ ಕ್ಷೇತ್ರಕ್ಕೆ ಮೀಸಲಿಟ್ಟಿರುವ ಮೊತ್ತ 1ಲಕ್ಷ ಕೋಟಿ ರುಪಾಯಿ. 2016 ರ ಸಮೀಕ್ಷೆ ಪ್ರಕಾರ ರೈತರು ವಾರ್ಷಿಕ ಆದಾಯ 20 ಸಾವಿರ ರು. ಆಗಿದ್ದು, ಇದು ಸರಕಾರಿ ಅಧಿಕಾರಿಯ ಮೊಬೈಲ್ ಬಿಲ್‌ಗಿಂತ ಕಡಿಮೆ.. 1970ರಲ್ಲಿ ಒಂದು ಕ್ವಿಂಟಲ್ ಗೋದಿ ಬೆಲೆ 76 ರು. ಇತ್ತು. ಈಗ 1,450 ರು. ಆಗಿದೆ. 45 ವರ್ಷದಲ್ಲಿ 19 ಪಟ್ಟು ಹೆಚ್ಚಳವಾಗಿದೆ. ಆದರೆ, ಸರಕಾರಿ ನೌಕರರ ವೇತನ 180 ಪಟ್ಟು ಹೆಚ್ಚಾಗಿದೆ. ಶಾಲಾ ಶಿಕ್ಷಕರ ವೇತನ 280 ಪಟ್ಟು, ಖಾಸಗಿ ವಲಯದ ವೇತನ 300 ಪಟ್ಟು ಹೆಚ್ಚಳವಾಗಿದೆ. ಆದರೆ, ಕೃಷಿ ಉತ್ಪನ್ನಗಳ ಬೆಲೆ ಏರಿಕೆ ಮರೀಚಿಕೆಯಾಗಿದೆ ಎಂದು ವಿಷಾದಿಸಿದರು.

ರೈತರ ಆದಾಯ ದ್ವಿಗುಣಕ್ಕೆ ಕೇಂದ್ರ, ನೂತನ ನೀತಿ ಜಾರಿಗೊಳಿಸಿದೆ. ವಾರ್ಷಿಕ 20 ಸಾವಿರ ಆದಾಯ 40 ಸಾವಿರವಾದರೆ ಯಾವ ಬದಲಾವಣೆ ಸಾಧ್ಯವಿಲ್ಲ. ಮಾಸಿಕ 1,200 ರು. ಆದಾಯ ಬರುವ ಕೃಷಿಯತ್ತ ಯುವ ರೈತರನ್ನು ಆಕರ್ಷಿಸಬೇಕಾದರೆ, ಆದಾಯ ಹೆಚ್ಚಳಕ್ಕೆ ಅಗತ್ಯ ವ್ಯವಸ್ಥೆ ಸೃಷ್ಟಿಸಬೇಕು. ಖಾಸಗಿ ಕಂಪನಿಗೆ ವಾರ್ಷಿಕ ಒಂದು ರು. ಬಾಡಿಗೆಗೆ ಜಾಗ ನೀಡುವ ಸರಕಾರ ರೈತರಿಗೆ ಏನು ಕೊಟ್ಟಿದೆ. 1995ರಿಂದ ಇಲ್ಲಿವರೆಗೆ 3.18ಲಕ್ಷ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. 1996ರಿಂದ 2015ರ ವರೆಗೆ 450 ಮಿಲಿಯನ್ ಜನ ನಗರ ಪ್ರದೇಶಕ್ಕೆ ವಲಸೆ ಹೋಗಿದ್ದಾರೆ. ಸ್ಮಾರ್ಟ್ ಸಿಟಿ ನಿರ್ಮಿಸಲು ಮುಂದಾಗುವ ಸರಕಾರ ಸ್ಮಾರ್ಟ್ ಹಳ್ಳಿ ರಚನೆಯತ್ತ ಗಮನ ನೀಡಬೇಕು ಎಂದು ಒತ್ತಾಯಿಸಿದರು.

ಕಾರ್ಯಾಗಾರದಲ್ಲಿ ಬೆಲೆ ಆಯೋಗದ ಅಧ್ಯಕ್ಷ ಟಿ.ಎನ್. ಪ್ರಕಾಶ್ ಕಮ್ಮರಡಿ, ಐಸೆಕ್ ನಿರ್ದೇಶಕ ಎಂ.ಬಿ. ಚಂದ್ರಪಾಲ್, ರೈತ ಮುಖಂಡ ಕುರುಬೂರು ಶಾಂತಕುಮಾರ್, ಆಯೋಗದ ರೈತಪ್ರತಿನಿಧಿ ಹನುಮನಗೌಡ ಬೆಳಗುರ್ಕಿ, ಕೃಷಿ ವಿಜ್ಞಾನಿಗಳು, ರೈತ ಮುಖಂಡರು ಹಾಗೂ ಕೃಷಿ ವಿವಿ ಮತ್ತು ಬೆಲೆ ಆಯೋಗದ ಅಧಿಕಾರಿಗಳು ಇದ್ದರು.

## ಗೋ ಶಾಲೆ ಅಕ್ರಮಕ್ಕೆ ಸೂಕ್ತ ಕ್ರಮ: ಸಚಿವ

ರಾಜ್ಯದ 56 ಪ್ರದೇಶದಲ್ಲಿ ಗೋ ಶಾಲೆ ತೆರೆದಿದ್ದು, 80 ಸ್ಥಳಗಳಲ್ಲಿ ಮೇವು ವಿತರಣಾ ಕೇಂದ್ರ ನಡೆಸಲಾಗುತ್ತಿದೆ. ಅವಶ್ಯವಿರುವ ಕಡೆ ಮೇವು ಕೇಂದ್ರ ತೆರೆಯಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಮೇವು ವಿತರಣೆ ಸಂದರ್ಭ ಅಕ್ರಮ ನಡೆಯುತ್ತಿದೆ ಎಂಬ ಬಗ್ಗೆ ದೂರು ಕೇಳಿಬಂದಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕೇಂದ್ರದಿಂದ 450 ಕೋಟಿ ರು. ಬರ ಪರಿಹಾರ ಮೊತ್ತ ಬಿಡುಗಡೆಯಾಗಿದೆ. ಇನ್ನೂ ಹೆಚ್ಚಿನ ಮೊತ್ತ ಬಿಡುಗಡೆ ಮಾಡುವಂತೆ ಕೇಂದ್ರ ಸಚಿವ ಅರುಣ್ ಜೇಟ್ಲಿ ಅವರಲ್ಲಿ ಮನವಿ ಮಾಡಲಾಗಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

## ಸೂಕ್ತ ಬೆಲೆ ಸಿಗುವಂತಾಗಲಿ

ಉತ್ಪಾದನೆ ಹೆಚ್ಚಿದರೆ ರೈತರ ಸ್ಥಿತಿಗತಿ ಸುಧಾರಣೆ ಆಗುವುದಿಲ್ಲ. ಪಂಜಾಬ್‌ನ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ 45 ಕ್ವಿಂಟಲ್ ಗೋದಿ ಬೆಳೆಯುತ್ತಾರೆ. ಇದು ಅಮೆರಿಕದ ಉತ್ಪಾದನೆಗೆ ಹೋಲಿಸಿದರೆ ತುಂಬಾ ಹೆಚ್ಚು. ಅಮೆರಿಕದಲ್ಲಿ ಶೇ.40ರಷ್ಟು ನೀರಾವರಿ ವ್ಯವಸ್ಥೆಯಿದ್ದರೆ, ಚೀನಾದಲ್ಲಿ ಶೇ.67ರಷ್ಟು ನೀರಾವರಿ ಬಳಕೆಯಿದೆ. ಪಂಜಾಬ್‌ನ ಶೇ.98ರಷ್ಟು ರೈತರು ನೀರಾವರಿ ಬಳಸುತ್ತಾರೆ. ಆದರೆ, ಪಂಜಾಬ್ ರಾಜ್ಯ ರೈತರ ಆತ್ಮಹತ್ಯೆಯಲ್ಲಿ ಮೊದಲ ಸ್ಥಾನ ಗಳಿಸಿದೆ. ಹೀಗಾಗಿ, ಉತ್ಪಾದನೆಗಿಂತ ಕೃಷಿ ಉತ್ಪನ್ನಕ್ಕೆ ಸೂಕ್ತ ಬೆಲೆ ಸಿಗುವಂತಾಗಬೇಕು ಎಂದು ಕೃಷಿ ಮತ್ತು ಆಹಾರ ನೀತಿ ವಿಮರ್ಶಕ ದೇವಿಂದರ್ ಶರ್ಮಾ ಅಭಿಪ್ರಾಯಪಟ್ಟರು.

ರಿನಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ
ರ್ಸರಿ ಶಾಲೆ ಮುಖ್ಯಸ್ಥರ ಬಂಧನ: ಪೋಷಕರ
ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶಾಲೆ ಬಂದ್

ಮಹಾಶಿವರಾತ್ರಿಗೆ ಕೆಎಸ್ಆರ್‌ಟಿಸಿಯಿಂದ
450 ಹೆಚ್ಚುವರಿ ಬಸ್ ಸಂಚಾರ



# ಭೂಮಿಗೂ ಬರಲಿದೆ ಲೀಸ್ ಭಾಗ್ಯ: ಕೃಷ್ಣ ಬೈರೇಗೌಡ

**ವಿಕ ಸುದ್ದಿಲೋಕ** ಬೆಂಗಳೂರು

ನೀರಾವರಿ ಸೌಲಭ್ಯವಿಲ್ಲದೆ ಪಾಳು ಬಿದ್ದಿರುವ ಒಣ ಭೂಮಿಯನ್ನು ರೈತರು ಗುತ್ತಿಗೆ ನೀಡುವ ಮೂಲಕ ಆದಾಯ ಗಳಿಸುವ ಅವಕಾಶವಿರುವ ಪ್ರಸ್ತಾವನೆಯನ್ನು ಕೇಂದ್ರದ ನೀತಿ ಆಯೋಗ ರಾಜ್ಯ ಸರಕಾರದ ಮುಂದಿಟ್ಟಿದ್ದು, ಇದರ ಸಾಧಕ-ಬಾಧಕಗಳ ಬಗ್ಗೆ ತಜ್ಞರು ಹಾಗೂ ರೈತ ಮುಖಂಡರ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗವು ನಗರದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಯ ಪ್ರಾರಂಭಿಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

''ರಾಜ್ಯದಲ್ಲಿ ಸುಮಾರು 15 ಲಕ್ಷ ಹೆಕ್ಟೇರ್‌ನಷ್ಟು ಜಮೀನು ಖಾಲಿ ಇದೆ ಎಂದು ಅಂದಾಜಿಸಲಾಗಿದೆ. ವ್ಯರ್ಥವಾಗಿರುವ ಕೃಷಿ ಭೂಮಿಯನ್ನು ಉತ್ಪಾದಕತೆಯ ಭೂಮಿಯನ್ನಾಗಿ ಮಾಡಬೇಕೆಂಬುದು ಕೇಂದ್ರ ಸರಕಾರ ಹಾಗೂ ನೀತಿ ಆಯೋಗದ ಮುಖ್ಯ ಉದ್ದೇಶ. ಹೀಗೆ, ಜಮೀನನ್ನು ಗುತ್ತಿಗೆ ನೀಡುವುದರಿಂದ ರೈತರ ಭೂಮಿ ಮೇಲಿನ ಹಕ್ಕಿಗೆ ಯಾವುದೇ ಬಾಧಕವಿಲ್ಲ'' ಎಂದು ಸ್ಪಷ್ಟಪಡಿಸಿದರು.



ಬೆಂಗಳೂರಿನಲ್ಲಿ ಸೋಮವಾರ ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಯ ಪ್ರಾರಂಭಿಕ ಕಾರ್ಯಾಗಾರದಲ್ಲಿ ಕೃಷಿ ಮತ್ತು ಆಹಾರ ನೀತಿ ವಿಮರ್ಶಕ ಡಾ. ದೇವೇಂದ್ರ ಶರ್ಮ, 'ಐಸೆಕ್'ನ ಅಧ್ಯಕ್ಷ ಡಾ.ಎ. ರವೀಂದ್ರ, ಸಚಿವ ಕೃಷ್ಣ ಬೈರೇಗೌಡ, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಉಪಸ್ಥಿತರಿದ್ದರು.

**ಕಂಪನಿಗಳಿಗೆ ಕೊಡುವ ಉದ್ದೇಶ ಇಲ್ಲ:**

''ರೈತರಿಂದ ಪಡೆಯುವ ಒಣ ಭೂಮಿಯನ್ನು ಕೃಷಿ ಮಾಡುವಂತಹ ಸಾಮರ್ಥ್ಯವಿರುವ ರೈತರಿಗೇ ಕೊಡಲು ಅವಕಾಶವಿದೆ. ಕಂಪನಿಗಳಿಗೆ ಕೊಡುವ ಪ್ರಸ್ತಾವ ಸರಕಾರದ ಮುಂದಿಲ್ಲ, ಸದ್ಯಕ್ಕೆ ರೈತರಿಂದ ಭೂಮಿಯನ್ನು ಗುತ್ತಿಗೆ ಪಡೆಯಲು ಕಾನೂನಿನಲ್ಲಿ ಅವಕಾಶ ಇಲ್ಲ, ಇದು ಭೂಸುಧಾರಣಾ ಚಳವಳಿಯ ಧ್ಯೇಯಕ್ಕೆ ವಿರುದ್ಧವಾದುದು ಕೂಡ. ಈ ಹಿನ್ನೆಲೆಯಲ್ಲಿ ಭೂ ಕಂದಾಯ ಕಾಯಿದೆಗೆ ತಿದ್ದುಪಡಿ ತರಬೇಕಾಗುತ್ತದೆ. ಹೀಗಾಗಿ, ಈ ಯೋಜನೆ ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ಸರಕಾರ ಯಾವುದೇ ತೀರ್ಮಾನ ಕೈಗೊಂಡಿಲ್ಲ,'' ಎಂದು ಸಚಿವರು ತಿಳಿಸಿದರು.

**ಕೈಗಾರಿಕೆಗಳಿಗೆ ನೀಡುವ ಉದ್ದೇಶದಿಂದಲೇ ಕೇಂದ್ರ ಸರಕಾರ ರೈತರ ಜಮೀನನ್ನು ಗುತ್ತಿಗೆ ಪಡೆಯಲು ಹೊರಟಿದೆ. ಇದು ರೈತರ ಕಣ್ಣೊರೆಸುವ ತಂತ್ರ. ಕೈಗಾರಿಕೆಗಳಿಗೆ 1 ರೂ. ಲೀಸ್ ಆಧಾರದಲ್ಲಿ ಚದರ ಮೀಟರ್ ಜಾಗ ಕೊಡುವ ಸರಕಾರ, ಅದೇ ಭೂಮಿಯನ್ನು ಅದೇ ದರದಲ್ಲಿ ರೈತರಿಗೆ ಕೊಡಲಿ. ಸ್ಮಾರ್ಟ್ ಸಿಟಿಗಳ ಬದಲು ಸ್ಮಾರ್ಟ್ ವಿಲೇಜ್‌ಗಳನ್ನು ಅಭಿವೃದ್ಧಿಪಡಿಸಲಿ. ಆಗ ನಗರ ಪ್ರದೇಶಗಳ ಜನ ಗ್ರಾಮೀಣ ಪ್ರದೇಶಗಳಿಗೇ ವಲಸೆ ಹೋಗುತ್ತಾರೆ.**

**- ಡಾ. ದೇವೇಂದ್ರ ಶರ್ಮ, ಕೃಷಿ ಮತ್ತು ಆಹಾರ ನೀತಿ ವಿಮರ್ಶಕ**

**ಗುಂಪು ಕೃಷಿಗೂ ಅವಕಾಶ:**

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ, ''ಕೇಂದ್ರ ಸರಕಾರದ ಮಾದರಿ ಗುತ್ತಿಗೆ ಭೂಮಿ ಕಾಯಿದೆಯ ಪ್ರಸ್ತಾವನೆ ಹಿನ್ನೆಲೆಯಲ್ಲಿ ರಾಜ್ಯದ 20 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಾಗಿದ್ದು, ರೈತರು ಕೃಷಿ ತೊರೆಯಲು ಕಾರಣ ಏನೆಂಬುದರ ಬಗ್ಗೆ ಕಾರಣಸಹಿತ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಯೋಜನೆಯನ್ವಯ ರೈತರು ಗುತ್ತಿಗೆ ನೀಡಲು ಒಪ್ಪಿದ್ದರೆ ಗುಂಪು ಕೃಷಿ ಮಾಡಲು ಕೂಡ ಅವಕಾಶವಿದೆ,'' ಎಂದರು.

ಕೃಷಿ ಹಾಗೂ ಆಹಾರ ನೀತಿ ವಿಮರ್ಶಕ ಡಾ. ದೇವೇಂದ್ರ ಶರ್ಮ, ಐಸೆಕ್‌ನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎ. ರವೀಂದ್ರ, ಕೃಷಿ ಬೆಲೆ ಆಯೋಗದ ಸದಸ್ಯ ಹನುಮನಗೌಡ ಬೆಳಗುರ್ಕಿ, ಧಾರವಾಡ ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ.ಎಂ. ಮಹದೇವಪ್ಪ, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಡಾ. ಗಾಣಗಿ, ರೈತ ಮುಖಂಡರಾದ ಮಾರುತಿ ಮಾನ್ಪಡೆ, ಕುರುಬೂರು ಶಾಂತಕುಮಾರ್, ಸುನಂದಾ ಜಯರಾಂ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# MSP for all crops will ensure ryots have income security, stem suicides

## Violating Price Will Attract Legal Action

ManuAiyappa.Kanathanda@
timesgroup.com

**Bengaluru:** Over the past decade, farmers in Karnataka have been reeling under low price realization for their crops — leading to declining rural incomes and a rising number of suicides. The main reason for this is that they easily fall prey to middlemen and wholesale traders, who often take them for a ride, quoting low prices.

That sad story may now come to an end, if the state government has its way.

In a first of its kind, the Karnataka Agriculture Pricing Commission has mooted a proposal to enact the Right to Remunerative Prices Act to give statutory powers to its agriculture agencies to initiate legal action against those who buy goods below the minimum support price (MSP).

KAPC chairman T N Prakash Kamaraddi said the government, as of now, has no powers to initiate action against anyone who buys crops from farmers for less than the MSP. By giving statutory status to the commission and state agriculture department, he said it can guarantee income security to all farmers of the state. "Under the proposed law, the government can initiate legal action against traders that includes confiscation of stock, imprisonment, penalty, among other things," he added.

Impressed by the proposal, he said the government referred it to National Law School, Bengaluru, to seek an expert report before preparing a draft bill. Kamaraddi said the support price will ensure farmers get the actual cost of production for crops.

Welcoming the move, Kurbur Shantakumar, state president of the Sugarcane Growers' Association, said it has been one of their long pending demands. Though the government announced MSP for various crops, no traders bought at that price, other than the government agencies.

This, he said, was because they knew the government could do nothing if they buy at a lower rate.

He cited the example of paddy, where the government announced MSP of Rs 1,500 per quintal. But farmers across the state were forced to sell their produce to private rice millers and traders at much lower rates. "Many of them ended up selling for Rs 700 to Rs 1,100 per quintal," he alleged.

As of now, only the Centre has the powers to announce statutory minimum price and fair and remunerative price for sugarcane, and the power to initiate legal action, if they find anyone buying produce for prices less than MSP.


TOI

**PROTECTION RULE:** A tough new law will give farmers their due

### SCOPE FOR ALTERNATIVES

"We have been working on the expert report for a week and need at least a month's time to submit it. It is a real challenge for us since the Minimum Support Price (MSP) is entirely a subject of the Centre, and not the states. Giving statutory powers to the commission or declaring statutory support price by states contravenes the constitution. But still, there is enough scope to find an alternative to ensure justice to farmers, who are in bad shape owing to price fluctuations and the vagaries of climate change. We are exploring and working on alternatives with the help of several experts in the field.

**M K Ramesh** | PROFESSOR OF LAW, NLSIU, BANGALORE

### HOW COMMISSION WILL WORK

Once the state government gives statutory powers to the Karnataka Agriculture Commission, it will function on the lines of the Centre's Commission for Agricultural Costs & Prices. Ahead of the kharif and rabi seasons, it will set up a statutory committee to study and recommend a price for crops. The committee will hold discussions with all stakeholders to ascertain the cost of production, margins of producers, dealers and firms, before arriving at a statutory support price. The commission will monitor seasonal farm harvest prices for all important crops in states, to see that farmers are not paid below MSP. If prices fall below the statutory MSP, it should make an immediate recommendation to the government to initiate legal action that includes penalty, cancelling trade licences and simple imprisonment.